ಬಸ್‌ನಿಲ್ದಾಣ ನಿರ್ಮಾಣ

283 (4010), ಶ್ರೀ ಪಾಟೀಲ್ ಜೆ.ಟಿ. (ಬೀಳಗಿ)

ಅ) ಬಾಗಲಕೋಟ ಜಿಲ್ಲೆಯಲ್ಲಿ ಅನೇಕ ದೊಡ್ಡ ಊರುಗಳಲ್ಲಿ ಬಸ್ ನಿಲ್ದಾಣ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬೀಳಗಿ ಕ್ಷೇತ್ರದಲ್ಲಿ ಇನ್ನೂ ಹಲವಾರು ಹಳ್ಳಿಗಳಿಗೆ ಬಸ್ ನಿಲ್ದಾಣಗಳು ಅವಶ್ಯಕತೆ ಇದ್ದು ಬಸ್ ನಿಲ್ದಾಣಗಳನ್ನು ನಿರ್ಮಿಸಲು ಸರ್ಕಾರ ಕ್ರಮ ಕೈಗೊಳ್ಳಲಾಗುವುದೇ; ಬಸ್ ನಿಲ್ದಾಣಗಳನ್ನು ಸಂಪೂರ್ಣವಾಗಿ ನಿರ್ಮಿಸಲಾಗುವುದೇ;

ಇ) ಬಸ್ ನಿಲ್ದಾಣಗಳನ್ನು ನಿರ್ಮಿಸಲು ಬೇಕಾಗುವ ಸಮಯವೆಷ್ಟು?

ಶ್ರೀ ರಾಮಲಿಂಗಾರೆಡ್ಡಿ (ಮಾನ್ಯ ಸಾರಿಗೆ ಸಚಿವರು)

ಅ) ಬಾಗಲಕೋಟ ಜಿಲ್ಲೆಯಲ್ಲಿರುವ ಜಿಲ್ಲಾ ಕೇಂದ್ರ, ತಾಲ್ಲೂಕು ಕೇಂದ್ರಗಳಲ್ಲಿ ಪಟ್ಟಣ ಪಂಚಾಯತ್ ಕೇಂದ್ರಗಳು ಹಾಗೂ ಹೋಬಳಿ ಕೇಂದ್ರಗಳಲ್ಲಿ ಒಟ್ಟು 18 ಬಸ್ ನಿಲ್ದಾಣಗಳನ್ನು ಈಗಾಗಲೇ ನಿರ್ಮಿಸಲಾಗಿದೆ. (ವಿವರಗಳನ್ನು ಅನುಬಂಧ–ಅ ರಲ್ಲಿ ಲಗತ್ತಿಸಿದೆ.)

ಆ) ಬೀಳಗಿ ಮತಕ್ಷೇತ್ರದ ಹಳ್ಳಿಗಳ ಜನಸಂಖ್ಯೆ, ಬಸ್ಸುಗಳ ಬೇಡಿಕೆಯ ಮೇರೆಗೆ ಇತರೆ ಕಡೆ ಬಸ್ ನಿಲ್ದಾಣಗಳ ಅವಶ್ಯಕತೆ ಬಗ್ಗೆ ಸಮೀಕ್ಷೆ ಮಾಡಲಾಗುವುದು. ಸದ್ಯ ಬೀಳಗಿ ತಾಲ್ಲೂಕಿನ ಸಿದ್ದಾಪೂರ ಮತ್ತು ಗಲಗಲಿ ಗ್ರಾಮಗಳಲ್ಲಿ ಬಸ್ ನಿಲ್ದಾಣ ನಿರ್ಮಿಸುವ ಬಗ್ಗೆ ನಿವೇಶನ ಒದಗಿಸುವಂತೆ ಕೋರಿ ಸಂಬಂಧಪಟ್ಟ ಪ್ರಾಧಿಕಾರದೊಂದಿಗೆ ಪತ್ರ ವ್ಯವಹಾರ ನಡೆಸಲಾಗುತ್ತಿದೆ.

ಇ) ಮೇಲ್ಕಂಡ ಬಸ್ ನಿಲ್ದಾಣಕ್ಕೆ ಬೇಕಾದ ನಿವೇಶನ ಲಭ್ಯವಾದ ನಂತರ ಟೆಂಡರ್ ಕರೆದು, ಟೆಂಡರ್ ಷರತ್ತಿನಲ್ಲಿ ನಿಗಧಿಪಡಿಸುವ ಕಾಲಮಿತಿಯಲ್ಲಿ ಕಾಮಗಾರಿಗಳನ್ನು ಪೂರ್ಣಗೊಳಿಸಲು ಕ್ರಮ ವಹಿಸಲಾಗುವುದು.

ಅನುಬಂಧ–ಅ

ಬಾಗಲಕೋಟೆ ಜಿಲ್ಲೆಯಲ್ಲಿ ಈಗಾಗಲೇ ನಿರ್ಮಿಸಲಾಗಿರುವ ಬಸ್ ನಿಲ್ದಾಣಗಳ ವಿವರ

ಕ್ರ ಸಂ.	ಬಸ್ ನಿಲ್ದಾಣಗಳ ಹೆಸರು		ಕ್ರ ಸಂ.	ಬಸ್ ನಿಲ್ದಾಣಗಳ ಹೆಸರು	
01	ಬಾಗಲಕೋಟ	ಜಿಲ್ಲಾ ಕೇಂದ್ರ	10	ಕುಳಗೇರಿ ಕ್ರಾಸ್	ಹೋಬಳಿ
02	ನವನಗರ (ಬಾಲಕೋಟ)	ಜಿಲ್ಲಾ ಕೇಂದ್ರ	11	ಬೀಳಗಿ	ತಾಲ್ಲೂಕು
03	ಹುನಗುಂದ	ತಾಲ್ಲುಕು	12	ಮುಧೋಳ	ತಾಲ್ಲೂಕು
04	ಇಳಕಲ್	ಪಟ್ಟಣ	13	ರಬಕವಿ	ಹೋಬಳಿ
05	ಅಮೀನಗಡ	ಪಟ್ಟಣ	14	ಬನಹಟ್ಟಿ	ಪಟ್ಟನ
06	ಕೂಡಲಸಂಗಮ	ಪಟ್ಟಣ	15	ಮಹಾಲಿಂಗಪೂರ	ಪಟ್ಟಣ
07	ಬದಾಮಿ	ತಾಲ್ಲೂಕು	16	ಲೋಕಾಪೂರ	ಪಟ್ಟಣ
08	ಗುಳೇದಗುಡ್ಡ	ಪಟ್ಟಣ	17	ಜಮಖಂಡಿ	ತಾಲ್ಲೂಕು
09	ಕೆರೂರು	ಹೋಬಳಿ	18	ತೇರದಾಳ	ಪಟ್ಟಣ

ಅಂಕಪಟ್ಟಿ ಹಗರಣದ ವಿದ್ಯಾರ್ಥಿಗಳು

284 (2732), ಶ್ರೀ ಅರವಿಂದ ಲಿಂಬಾವಳಿ (ಮಹದೇವಪುರ)

ಅ) ಅಂಕಪಟ್ಟಿ ಹಗರಣದಲ್ಲಿ ಸಿಕ್ಕಿಬಿದ್ದ ವೈದ್ಯ ವಿದ್ಯಾರ್ಥಿಗಳ ಫಲಿತಾಂಶ ರದ್ದುಪಡಿಸಿ ಮರು ಪರೀಕ್ಷೆ ಮಾಡಿರುವ ಪ್ರಕರಣವು ಬೆಳಕಿಗೆ ಬಂದಿದೆಯೇ?

ಆ) ಅಂತಹ ವಿಶ್ವ ವಿದ್ಯಾಲಯಗಳು ಯಾವುದು, ಆ ವೈದ್ಯ ವಿದ್ಯಾರ್ಥಿಗಳು ಯಾರು, ಯಾವ ಪ್ರಕರಣದಲ್ಲಿ ಈ ವಿದ್ಯಾರ್ಥಿಗಳು ಸಿಕ್ಕಿಬಿದ್ದಿದ್ದರು. ಇದಕ್ಕೂ ಪರೀಕ್ಷೆ ಫಲಿತಾಂಶ ತಡೆಗೂ ಏನು ಸಂಬಂಧ ಎಷ್ಟು ಜನ ವಿದ್ಯಾರ್ಥಿಗಳು ಇದರಲ್ಲಿ ಭಾಗಿಯಾಗಿದ್ದರು?